

ವಿವಾಹ ಸಂದರ್ಭದಲ್ಲಿ ಪತಿಯೊಂದಿಗೆ ಸರೋಜಾದೇವಿ.

### ಕುಟುಂಬದೊಡನೆ ಮಧುಚಂದ್ರ

ಸರೋಜಮ್ಮ ಸದಾ ಕುಟುಂಬ ವತ್ಸಲೆ. ಅವರಿದ್ದಲ್ಲೆಲ್ಲ ಅವರ ಸಹೋದರಿಯರೂ, ಅವರ ಕುಟುಂಬವೂ ಇರುತ್ತಿತ್ತು. ಮದುವೆಯಾದ ನಂತರ ಮಧುಚಂದ್ರಕ್ಕೆ ವಿದೇಶಗಳಿಗೆ ಹೋದರೆ, ಅಲ್ಲಿಯೂ ಅವರ ಅಮ್ಮ, ಸಹೋದರಿಯರು ಜೊತೆಯಾಗಿದ್ದರು. ಎಲ್ಲರಿದ್ದಾಗಲೇ ಸಂಭ್ರಮ ಎನ್ನುವುದು ಅವರ ನಂಬಿಕೆಯಾಗಿತ್ತು. ಹಾಗೆಯೇ ಬದುಕಿದರು. ತಮ್ಮನ್ನು ಅತಿಯಾಗಿ ಪ್ರೀತಿಸುತ್ತಿದ್ದ, ತಾವೂ ವಿಪರೀತವಾಗಿ ಹಚ್ಚಿಕೊಂಡಿದ್ದ ಜೀವ ಶ್ರೀಹರ್ಷ ಮತ್ತು ಭುವನೇಶ್ವರಿಯನ್ನು ಅವರು ಕೂಡಿಕೊಂಡರು. ಆ ಸಮಾಧಾನ ಈ ವಿದಾಯದಲ್ಲಿ ಹುಡುಕಬೇಕಾಗಿದೆ.

### ನೆಲದ ಮೇಲಿನ ತಾರೆಯರು

ಆ ಕಾಲದಲ್ಲಿ ಅವರೆಲ್ಲ ತಾರೆಯರಾಗಿದ್ದರೂ ನೆಲದ ಮೇಲಿದ್ರು. ನೆಲಕ್ಕೆ ಕಾಲಂಟಿಸಿಕೊಂಡು ಕೂರುತ್ತಿದ್ದರು. ಎಂದೂ ಯಾರ ಮುಂದೆಯೂ ದರ್ಪ ತೋರಿ ಕಾಲಿನ ಮೇಲೆ ಕಾಲು ಹಾಕಿಕೊಂಡು ಕೂರುತ್ತಿರಲಿಲ್ಲ. ರಾಜಣ್ಣ ಆಗಿರಲಿ, ಸರೋಜದೇವಿ ಆಗಿರಲಿ ಇವರನ್ನೆಲ್ಲ ಒಮ್ಮೆ ನೆನಪಿಸಿಕೊಂಡು ನೋಡಿ. ತಾರಾಗಿರಿ ನೆತ್ತಿಗೆ ಏರದ ದಿನಗಳವು. ಈ ಕಾರಣದಿಂದಲೂ ಅವರು ಜನಮಾನಸದಲ್ಲಿ ಬೇರೂರಿದರು.

ಹೆಣ್ಣುಮಕ್ಕಳು ಯಾವುದಕ್ಕೂ ಕುಗ್ಗಬಾರದು. ವಿಧೇಯರಾಗಿದ್ದರೂ ಆತ್ಮಗೌರವಕ್ಕೆ ಧಕ್ಕೆ ಬಾರದಂತಿರಬೇಕು. ನಾವು ಶಕ್ತಿ ಸ್ವರೂಪರು. ನಮ್ಮೊಳಗೆ ಶಕ್ತಿ ದೇವತೆ ಇರುತ್ತಾಳೆ ಎಂದು ನಂಬಿದ್ದರು. ಮತ್ತು ಎಲ್ಲರಿಗೂ ಆ ಶಕ್ತಿ ಪ್ರವಹಿಸುವಂತೆ ಮಾಡುತ್ತಿದ್ದರು. ಈಗ ಪ್ರೇಕ್ಷಕರಿಗೆ ಕಾಲು ತೋರಿಸಿಕೊಂಡು, ತೆರೆಗೆ, ವೇದಿಕೆಗೆ ಬೆನ್ನು ತೋರಿಸಿಕೊಂಡು ಬರುವ ತಾರಾಗಣ, ಆ ಕಾಲದ ಹಿರಿಯರಿಂದ ಕಲಿಯಬೇಕಿರುವುದು ಈ ಸರಳತನ ಮತ್ತು ದಿಟ್ಟತನಗಳನ್ನು.

## ಒಂದು ಮೂಗುತಿ ಕತೆ

ಹೆಣ್ಮಕ್ಕಳೆಂದರೆ ಅಲಂಕಾರ ಮಾಡಿಕೊಂಡಿರಬೇಕು. ಕೂದಲು ಒಪ್ಪ ಓರಣವಾಗಿರಬೇಕು. ಓಲೆ, ಮೂಗುತಿ ಇರಬೇಕು, ಬಳೆ ಇರಬೇಕು ಎಂದೆಲ್ಲ ಬಯಸೋರು. ನನಗೂ ಒಂದು ವಜ್ರದ ಮೂಗುತಿ ಕೊಟ್ಟಿದ್ದರು. ಅದನ್ನು ಧರಿಸಿದಾಗಲೆಲ್ಲ, ಅದೆಲ್ಲಿ ಕಳೆದುಹೋದೀತು ಎಂಬ ಆತಂಕದಿಂದ ಎತ್ತಿಡುತ್ತಿದ್ದೆ. ಕಳೆದುಹೋದರೆ, ಇನ್ನೊಂದು ಕೊಳ್ಳೋಣ ಬಿಡು ಎಂದು ಧೈರ್ಯ ತುಂಬುತ್ತಿದ್ದರು. ಮೂಗುತಿ ಧರಿಸಿದ ಫೋಟೊ ಅವರಿಗೆ ಕಳುಹಿಸಿಕೊಟ್ಟಿದ್ದೆ. ಆದೆಷ್ಟು ಚಂದ ಕಾಣುತ್ತೀಯ ಅಂತ ಉದ್ಗರಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಎಲ್ಲರೂ ಖುಷಿಯಾಗಿರಲಿ, ಚಂದ ಇರಲಿ ಎಂದು ಬಯಸುತ್ತಿದ್ದ ಜೀವ ಅದು.

ಅವರ ಮೂಗುತಿಯನ್ನು ಅವರ ವಿದಾಯದ ಸಂದರ್ಭದಲ್ಲಿ ಎದೆ ಮೇಲಿಟ್ಟು ಬಂದೆ. ಅವರ ಮೊಮ್ಮಗಳಿಗೆ ಹೇಳಿದೆ. ಅವಳು ಆ ನೆನಪನ್ನು ಜೋಪಾನವಾಗಿ ಎತ್ತಿಟ್ಟುಕೊಂಡಳು.



ಆಶ್ರಯವಾಗಿದ್ದವು. ಔಟ್‌ಡೋರ್ ಶೂಟಿಂಗ್ ಹೋದರೆ, ಲೈಟ್ಸ್‌ಬಾಯ್‌ಗಳೇ ದಪ್ಪದ ಸೀರೆಗಳನ್ನು ನಾಲ್ಕು ಮೂಲೆಗೆ ಕಟ್ಟಿ ಮರೆ ಮಾಡುತ್ತಿದ್ದರು. ತಮ್ಮ ಮನೆಯ ಹೆಣ್ಣುಮಕ್ಕಳನ್ನು ನಡೆಸಿಕೊಂಡಷ್ಟೇ ಗೌರವದಿಂದ ನಮ್ಮನ್ನು ನಡೆಸಿಕೊಳ್ಳುತ್ತಿದ್ದರು. ಅಂಥ ಮೇಲ್ಪಂಕ್ತಿಯನ್ನು ಬಿ. ಸರೋಜಾದೇವಿ ಹಾಕಿಕೊಟ್ಟಿದ್ದರು.

ಅಕ್ಕಂದಿರೊಡನೆ, ಅಮ್ಮನೊಡನೆ ಇದ್ದ ಬಲುದೊಡ್ಡ ಕುಟುಂಬ ಅದು. ಅಕ್ಕನ ಮಗಳು ಭುವನೇಶ್ವರಿ ಇವರ ಮಡಿಲಲ್ಲಿಯೇ ಬೆಳೆದಳು. ಒಡಲು ಅಕ್ಕನದ್ದು, ಮಡಿಲು ಇವರದ್ದಾಯಿತು. ಅಮ್ಮ– ಅಪ್ಪ ಅಂತ ಕರೆಯುತ್ತ, ಇವರ ಮಗಳಾಗಿಯೇ ಹೋದಳು.

ಎರಡು ಸಾವುಗಳು ಅವರನ್ನು ತತ್ತರಗೊಳಿಸಿದ್ದವು. ಒಂದು ಶ್ರೀಹರ್ಷ ಅವರದ್ದು. ಇನ್ನೊಂದು ಮಗಳು ಭುವನೇಶ್ವರಿಯದ್ದು. ಓದುವ ಹವ್ಯಾಸ ಇರುವ ಭುವನೇಶ್ವರಿಯ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಒಂದು ದತ್ತಿನಿಧಿ ಪ್ರಶಸ್ತಿ ಸ್ಥಾಪಿಸಿದರು. ಪ್ರತಿವರ್ಷವೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಾಜರಿರುತ್ತಿದ್ದರು.

ಬಿ. ಸರೋಜಾದೇವಿ ಅವರು ಇಡೀ ದೇಶಕ್ಕೆ ಸೇರಿದವರು. ಎಲ್ಲರ ಪ್ರೀತಿಯನ್ನು ಉಳಿಸಿಕೊಂಡ ಬಗೆ ನನಗೆ ಸದಾ ಅಚ್ಚರಿ ಹುಟ್ಟಿಸುತ್ತದೆ. ತಮಿಳುನಾಡು ಸರ್ಕಾರ ಪದ್ಮಶ್ರೀಗೆ ಶಿಫಾರಸು ಮಾಡಿತು. ಕರ್ನಾಟಕ ಪದ್ಮವಿಭೂಷಣಕ್ಕೆ. ಫಾಲ್ಕೆ ಪ್ರಶಸ್ತಿಯೂ ದೊರೆಯಿತು. ಎಲ್ಲರ ಪ್ರೀತಿಯನ್ನು ಗಳಿಸುವುದು, ಉಳಿಸಿಕೊಳ್ಳುವುದು ಅವರಿಗೆ ಗೊತ್ತಿತ್ತು.

87 ವರ್ಷಗಳೆಂದಾಗ ನಾನೇ ಹುಬ್ಬೇರಿಸಿದೆ. ಸರೋಜಮ್ಮ, ನಮ್ಮ ನಡುವೆ 87 ವರ್ಷ ಕಳೆದ್ರಾ.. ನೆನ್ನೆ ಮೊನ್ನೆ ಭೇಟಿಯಾದಂತಿದೆ ಅಂತನಿಸುವಾಗಲೇ ಪಂಚಭೂತಗಳಲ್ಲಿ ಲೀನರಾದರು. ಹೇಗೆ ಬದುಕಬೇಕು ಎಂದು ಕಲಿಸುವಂಥ ಜೀವಗಳು ಭೂಮಿಯ ಮೇಲೆ ಅಪರೂಪ. ಅವರ ಒಡನಾಟದಲ್ಲಿ ನಾವಿದ್ವಿ ಎನ್ನುವುದೇ ನಮ್ಮ ಪಾಲಿನ ಸಗ್ಗ! ■